'ಬರೆಯುವ' ಮೂಲಕ ಅವನಿಗೆ ಕಳೆದ ಶತಮಾನದ ಬಹು ಮುಖ್ಯ ಕವಿಯೆಂಬ ಸ್ಥಾನವನ್ನು ದೊರಕಿಸಿಕೊಟ್ಟರು. ಪೆಸೋಆ ತನ್ನ ಸ್ನೇಹಿತನೊಬ್ಬನಿಗೆ ಬರೆದ ಪತ್ರದಲ್ಲಿ ಈ ಮೂರು 'ಆಲ್ಟರ್–ಈಗೋ'ಗಳು ಅಥವಾ ಕಾವ್ಯನಾಮಗಳು ಹೇಗೆ ಹುಟ್ಟಿಕೊಂಡವೆಂದು ವಿವರಿಸಿದ್ದಾನೆ:

ಒಂದು ದಿನ – 1914ರ ಮಾರ್ಚ್ 8ರಂದು – ನಾನೊಂದು ಎತ್ತರದ ಬೀರುವಿನತ್ತ ಹೋಗಿ, ಕಾಗದದ ಕೆಲವು ಹಾಳೆಗಳನ್ನು ಎತ್ತಿಕೊಂಡು, ಸಾಮಾನ್ಯವಾಗಿ ನನಗೆ ಸಾಧ್ಯವಾದಾಗಲೆಲ್ಲ ಬರೆಯುವಂತೆ, ನಿಂತುಕೊಂಡೇ ಬರೆಯತೊಡಗಿದೆ. ಒಂದು ಬಗೆಯ ಭಾವಾವೇಶದಲ್ಲಿ ಒಂದರ ನಂತರ ಒಂದರಂತೆ ಸುಮಾರು ಮೂವತ್ತು ಕವನಗಳನ್ನು ಬರೆದುಬಿಟ್ಟೆ. ಹೇಗೆ ಎಂದು ವಿವರಿಸಲಾರೆ. ಅದು ನನ್ನ ಜೀವನದ ಅತ್ಯಂತ ಯಶಸ್ಸಿನ ದಿನ... ನಾನು 'ಕುರಿಮಂದೆಯ ಕಾವಲುಗಾರ' ಎಂಬ ಶೀರ್ಷಿಕೆಯಿಂದ ಪ್ರಾರಂಭಿಸಿದೆ. ಆಗ ನನ್ನೊಳಗೆ ಬೇರೊಬ್ಬ ಕಾಣಿಸಿಕೊಂಡ; ಅವನಿಗೆ ಆಲ್ಬರ್ತೊ ಕಾಯಿರೊ ಎಂದು ಹೆಸರಿಟ್ಟೆ... ಆಲ್ಬರ್ತೊ ಕಾಯಿರೊ ಕಾಣಿಸಿಕೊಂಡ ತಕ್ಷಣವೇ ನಾನು – ಸಹಜ ಪ್ರವೃತಿಯಿಂದ ಹಾಗೂ ನನ್ನ ಸುಪ್ತಪ್ರಜ್ಞೆಯ ಪ್ರಭಾವದಿಂದ – ಆತನ ಶಿಷ್ಯರನ್ನು ಕಂಡುಹಿಡಿಯಲೇಬೇಕೆಂದು ತಹತಹಿಸಿದೆ. ಆ ಇಬ್ಬರು ಶಿಷ್ಯರೇ ರಿಕಾರ್ಡೊ ರೇಯಿಸ್ ಮತ್ತು ಅಲ್ವಾರೊ ದ ಕಾಂಪೋಸ್.



ಸುಮತೀಂದ್ರ ನಾಡಿಗ

ಈಗ ಈ ಮೂವರ ಬಗ್ಗೆ ಒಂದಿಷ್ಟು ವಿವರಗಳು: ಆಲ್ಬರ್ತೊ ಕಾಯಿರಾ ಡಿ ಸಿಲ್ವ ಹುಟ್ಟಿದ್ದು 1889ರಲ್ಲಿ, ಲಿಸ್ಬನ್ನಿನಲ್ಲಿ. ಸ್ವಲ್ಪ ಕಾಲ ಒಂದು ಹಳ್ಳಿಯಲ್ಲಿ ತನ್ನ ಚಿಕ್ಕಮ್ಮನ ಜೊತೆ ಇದ್ದವನು ಕ್ಷಯರೋಗದಿಂದಾಗಿ 1915ರಲ್ಲಿ, ತಾನು ಸಾಯುವುದಕ್ಕೆ ಕೆಲವೇ ತಿಂಗಳ ಮುಂಚೆ, ಲಿಸ್ಬನ್ನಿಗೆ ಬಂದ. ಆದರೂ ಅವನು 1930ರ ವರೆಗೂ 'ತನ್ನ' ಕವನಗಳನ್ನು ಹೇಳಿ ಬರೆಯಿಸುತ್ತಿದ್ದ – ಪೆಸೋಅನ ಮೂಲಕ.

ರಿಕಾರ್ಡೊ ರೇಯಿಸ್ ವೈದ್ಯಕೀಯ ಶಿಕ್ಷಣ ಪಡೆದ ಒಬ್ಬ ವೈದ್ಯ; ತನಗೆ ಮೂವತ್ತು ವರ್ಷ ತುಂಬುವ ಹೊತ್ತಿಗೇ ಅಮೆರಿಕದ ಎರಡೂ ಖಂಡಗಳಿಗೆ ಹೋಗಿಬಂದಿದ್ದ. ಆಮೇಲೆ 1919ರಿಂದ ಬ್ರೆಝಿಲ್ಲಿನಲ್ಲೇ ವಾಸಮಾಡುತ್ತಿದ್ದನೆಂದು ಸ್ವತಃ ಪೆಸೋಅನೇ ಒಮ್ಮೆ ಹೇಳಿದ್ದ. ಮತ್ತೆ ಪೆಸೋಅನ ಕಾಗದ ಪತ್ರಗಳಲ್ಲಿ ಒಂದೆಡೆ ಡಾ. ರಿಕಾರ್ಡೊ ಸಕ್ವೇರಾ ರೇಯಿಸ್ ಪೆರು ದೇಶದಲ್ಲಿದ್ದಾನೆಂದು ಸಮರ್ಥಿಸುವ ಒಂದು ವಿಳಾಸವೂ ಉಂಟು.

ಆಲ್ವರಾ ಡಿ ಕಾಂಪೋಸ್ ಹುಟ್ಟಿದ್ದು 1890ರಲ್ಲಿ, ಆಲ್ಗಾರ್ವೆ ಎಂಬಲ್ಲಿ. 'ನೇವಲ್ ಎಂಜಿನಿಯರ್ ಮತ್ತು ಸಂವೇದನಾಶೀಲ ಕವಿ' ಎಂದು ಸಹಿ ಮಾಡುತ್ತಿದ್ದ ಈತ ತನ್ನ ಸೃಷ್ಟಿಕರ್ತಗಿಂತ ಸಾಕಷ್ಟು ಎತ್ತರವಾಗಿದ್ದ. ಪೆಸೋಅನಲ್ಲಿ ತುಸು ಯೆಹೂದಿ ರಕ್ತವಿದ್ದರೆ ಇವನು ಯೆಹೂದಿಯೇ ಆಗಿದ್ದ. ಪೆಸೋಅ ಸಿಕ್ಕಾಪಟ್ಟೆ ಕುಡಿಯುವವನಾಗಿದ್ದರೆ ಇವನು ಲಘು ಪಾನೀಯವನ್ನೂ ಅಫೀಮನ್ನೂ ಸೇವಿಸುತ್ತಿದ್ದ. ಹಾಗೆ ನೋಡಿದರೆ ಇವನು ತನ್ನ ಮನೋವೃತ್ತಿಯಲ್ಲಿ, ಆಸೆ ಆಕಾಂಕ್ಷೆಯಲ್ಲಿ, ಆತಂಕಗಳಲ್ಲಿ ಪೆಸೋಅನೇ ಆಗಿದ್ದನೆನ್ನಬೇಕು. ಅಥವಾ ಪೆಸೋಅನ ಕನಸುಗಳ ಸಾಕಾರಮೂರ್ತಿ